ಶ್ರೀ ಯು. ಆರ್. ಸಭಾಪತಿ :- ತಾವು ಈ ರೀತಿ ಉತ್ತರ ಹೇಳುವುದಾದರೆ ತಾವು ಉತ್ತರ ಕೊಡುವುದು ಬೇಡ.

ಶ್ರೀ ಎಂ.ಸಿ. ನಾಣಯ್ಯ :- ಉತ್ತರ ಕೊಡುವುದು ಬೇಡ ಎಂದು ಆದರೆ ನಾನು ಉತ್ತರ ಕೊಡುವುದಿಲ್ಲ.

ಶ್ರೀ ಯು. ಆರ್. ಸಭಾಪತಿ :- ಮೂರು ವರ್ಷಗಳಿಂದ ಇದೇ ರೀತಿ ಹಾರಿಕೆ ಉತ್ತರ ಕೊಡುತ್ತಿದ್ದೀರಿ. ಆ ಉತ್ತರ ನಮಗೇಕೆ? ನಾನು ಇದನ್ನು ಪ್ರತಿಭಟಿಸಿ ಧರಣಿ ಕೂರುತ್ತೇನೆ.

(ಮಾನ್ಯ ಸದಸ್ಯರಾದ ಯು. ಆರ್. ಸಭಾಪತಿಯವರು ಧರಣಿ ಕುಳಿತರು)

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಧರಣಿ ಕುಳಿತಿರುವ....

ಶ್ರೀ ಯು. ಆರ್ . ಸಭಾಪತಿ :- ಮಾನ್ಯ ಅಧ್ಯಕ್ಷರೇ, ಉತ್ತರ ಕೇಳುವುದಕ್ಕೆ ಏಕೆ ಅವರಿಗೆ ಸಂಯಮ ಇಲ್ಲ. ಈ ಅರಣ್ಯ ಜಮೀನು ಎಂದು ಹೇಳುತ್ತಿರತಕ್ಕಂಥಾದ್ದರ ಬಗ್ಗೆ ನಾನು ಹೇಳುತ್ತಿದ್ದೇನೆ. ಇವತ್ತು ನಮಗೆ ತಾತ್ವಿಕವಾಗಿ ಅರಣ್ಯ ಜಮೀನನ್ನು ಸರ್ಕಾರ ಮಂಜೂರು ಮಾಡುವುದಕ್ಕೆ ಅಧಿಕಾರ ಇಲ್ಲ. ಸಿ ಅಂಡ್ ಡಿ ಕ್ಲಾಸಿಫೇಕೇಷನ್ ಲ್ಯಾಂಡ್‌ನ್ನು ಎಷ್ಟೋ ಲಕ್ಷ ಎಕರೆ ಜಮೀನನ್ನು ಒಂದು ಸಲ ಕೊಟ್ಟಾಯಿತು. ಆದರೆ ಈ ಮಧ್ಯೆದಲ್ಲಿ ಏನಾಯಿತು ಅಂದರೆ ಅರಣ್ಯ ಇಲಾಖೆಯವರು ಸಿ ಅಂಡ್ ಡಿ ಲ್ಯಾಂಡ್‌ನ್ನು ಕೆಲವು ಕಡೆ ನೋಟಿಫಿಕೇಶನ್ ಮಾಡಲಿಲ್ಲ. ನೋಟಿಫಿಕೇಷನ್ ಮಾಡದೇ ಇರುವಂತಹ ಜಮೀನು ಯಾವುದುಂಟು, ಅದನ್ನು ಸರ್ಕಾರ ಕೊಡಲಿಕ್ಕೆ ಅವಕಾಶ ಇದೆ. ಎಲ್ಲಿ ಅವರು ಅದನ್ನು ನೋಟಿಫೈ ಮಾಡಿದ್ದಾರೆ ಆ ಜಮೀನನ್ನು ಸರ್ಕಾರ ಮಂಜೂರು ಮಾಡುವುದಕ್ಕೆ ಅಧಿಕಾರ ಇಲ್ಲ.

ಶ್ರೀ ವಸಂತ. ವಿ. ಸಾಲಿಯಾನ :- ಮಾನ್ಯ ಅಧ್ಯಕ್ಷರೇ, ಹಕ್ಕು ಪತ್ರ ಕೊಟ್ಟನಂತರ ನೋಟಿಫೈ ಮಾಡಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ :- ನಾನು ಹೇಳುವುದನ್ನು ಸ್ವಲ್ಪ ದಯಮಾಡಿ ಕೇಳಿ. ನಾನೇ ಎರಡು ಸಭೆಗಳನ್ನು ಮಾಡಿದ್ದೇನೆ. ಕಾನೂನು ಇಲಾಖೆಯ ಮುಖಾಂತರ ಈ ಒಂದು ಪ್ರಶ್ನೆ ಬಂದಾಗ ರೆವಿನ್ಯೂ ಇಲಾಖೆಯ ಅಧಿಕಾರಿಗಳನ್ನು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕರೆದು ನಾನು ಎರಡು ಸಭೆಗಳನ್ನು ಮಾಡಿದ್ದೇನೆ. ನನಗೆ ಅದರ ಬಗ್ಗೆ ಮಾಹಿತಿ ಇದೆ. ಎಲ್ಲಾ ಸಿ ಅಂಡ್ ಡಿ ಜಮೀನು ರೆವಿನ್ಯೂ ಜಮೀನನ್ನು ವರ್ಗಾವಣೆ ಮಾಡಿ ನೋಟಿಫೈ ಮಾಡಿದ್ದಾರೆ, ನೋಟಿಫೈ ಮಾಡಿರತಕ್ಕಂಥ ಜಮೀನುಗಳನ್ನು ನಾವು ಇವತ್ತು ಮಂಜೂರಾತಿ ಮಾಡುವುದಕ್ಕೆ ಅಧಿಕಾರ ಇಲ್ಲ. ಈ ಎಲ್ಲಾ ಜಮೀನುಗಳನ್ನು ನಾವು ಪಟ್ಟಿ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಆ ವಿಧೇಯಕದ ಪ್ರಕಾರ ಕೇಂದ್ರ ಸರ್ಕಾರದ ಅನುಮತಿ ಪಡೆಯಲೇಬೇಕು.

ಅಧ್ಯಕ್ಷರು :- ಮೊದಲೇ ಹಕ್ಕುಪತ್ರ ಕೊಟ್ಟಿದ್ದರೆ.....

ಶ್ರೀ ಎಂ.ಸಿ. ನಾಣಯ್ಯ :- ಮೊದಲೇ ಹಕ್ಕುಪತ್ರ ಕೊಟ್ಟಿರತಕ್ಕಂಥಾದ್ದು ಮತ್ತು ನೋಟಿಫೈ ಮಾಡಿರತಕ್ಕಂಥಾದ್ದು ಹಿಂದೆ ಆದರೆ ಇಂತಹ ಪ್ರಕರಣಗಳನ್ನು ನಾನು ಖಂಡಿತವಾಗಿ ಎತ್ತಿಕೊಳ್ಳುತ್ತೇನೆ. ಬಹುಶ: ಯಾವ ಯಾವ ಪ್ರಕರಣಗಳಲ್ಲಿ ಹಕ್ಕುಪತ್ರ ಕೊಟ್ಟಿದ್ದಾರೆ ನೋಟಿಫೈ ಆಗಿರುವಂತಾದ್ದು ಹಿಂದೆ ಆಗಿದ್ದರೆ ಅಂಥಾದ್ದನ್ನು ಕೊಡಲಿಕ್ಕೆ ನಾನು ಹೇಳುತ್ತೇನೆ. ಬಹುಶ: ಕಾನೂನಿನ ಅಡಿಯಲ್ಲಿ ನಮಗೆ